**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯ**

**ಸಿಸಿ ನಂ:735/2024**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ:** |
|---|---|---|
| ಪ್ರಸನ್ನ ಸಿ.ಜೆ.<br>ಬಿನ್ ಜಯಪ್ಪ<br>ವಯಸುಃ 46 ವರ್ಷ<br>ವಾಸಃ ಅರಳಿಕಟ್ಟೆ ಗ್ರಾಮ,<br>ಸಂತೆಬೆನ್ನೂರು ಹೋಬಳಿ,<br>ಚನ್ನಗಿರಿ ತಾಲ್ಲೂಕು<br>ದಾವಣಗೆರೆ ಜಿಲ್ಲೆ | | ರಂಗಸ್ವಾಮಿ ಟಿ.ಎಮ್.<br>ಬಿನ್ ಲೇಟ್ ಮುರಿಗೇಪ್ಪ<br>ವಯಸುಃ 30 ವರ್ಷ<br>ವಾಸಃ ನೀತಿಗೆರೆ ಗ್ರಾಮ,<br>ಚನ್ನಗಿರಿ ತಾಲ್ಲೂಕು,<br>ದಾವಣಗೆರೆ ಜಿಲ್ಲೆ . |

ನಾನು ಶ್ರೀಮತಿ ಮಹಾಲಕ್ಷ್ಮೀ ಜಿ **2** ನೇ ಹೆಚ್ಚುವರಿ ಸಿವಿಲ್.ನ್ಯಾದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿಯಾದ ನೀವು:-

**ಃ ಆಪಾದನೆ ಃ**

ಆರೋಪಿಯಾದ ನೀನು ಪಿರ್ಯಾದುದಾರರಿಂದ ಮನೆಯನ್ನು ಕಟ್ಟುವ ಉದ್ದೇಶಕ್ಕಾಗಿ ದಿಃ19.09.2023 ರಂದು ಕೈಗಡ ಸಾಲವಾಗಿ ರೂಃ3,50,000/- ಹಣವನ್ನು ಸಾಲವಾಗಿ ಪಡೆದುಕೊಂಡು ಅದರ ತೀರುವಳಿಗಾಗಿ ಐಡಿಎಫ್‌ಸಿ ಬ್ಯಾಂಕ್ ಚನ್ನಗಿರಿ ಶಾಖೆ ನಿಮ್ಮ ಖಾತೆಗೆ ಸಂಬಂಧಿಸಿದ, ದಿನಾಂಕಃ 26.102.2023 ರ ಪೋಸ್ಟ್ ಡೇಟೆಡ್ ಚೆಕ್ ಸಂಖ್ಯೆ – 000006 ನ್ನು ನೀಡಿದ್ದು, ಅದನ್ನು ಪಿರ್ಯಾದುದಾರು ತನ್ನ ಖಾತೆಯಾದ ಕೆನರಾ ಬ್ಯಾಂಕ್, ದೇವರಹಳ್ಳಿ ಶಾಖೆಯಲ್ಲಿ ದಿನಾಂಕಃ 26.10.2023 ರಂದು ನಗದೀಕರಣಕ್ಕಾಗಿ ಹಾಜರುಪಡಿಸಿದ್ದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಸದರಿ ಚೆಕ್ 03.11.2023 ರಂದು ಹಿಂದಿರುಗಿಸಲ್ಪಟ್ಟಿರುತ್ತದೆ. ಆದ್ದರಿಂದ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 28.11.2023 ರಂದು ಲೀಗಲ್ ನೋಟಿಸು ನೀಡಿದ್ದು, ಸದರಿ ನೋಟಿಸನ್ನು ದಿಃ09.12.2023 ರಂದು ಜಾರಿಯಾಗಿ ಹಾಗೂ ಸದರಿ ಸಾಲದ ಹಣವನ್ನು ಹಿಂದಿರುಗಿಸಿರುವುದಿಲ್ಲ ಹಾಗೂ ಲೀಗಲ್

ನೋಟಿಸಿಗೆ ಉತ್ತರವನ್ನು ಸಹ ನೀಡಿರುವುದಿಲ್ಲ. ಆದ್ದರಿಂದ ಕಲಂ 138 ನೆಗೋಷಿಯಬಲ್ ಕಾಯ್ದೆ ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾಧಿಸಿದೆ.

ಸ್ಥಳಃ ಚನ್ನಗಿರಿ
ದಿನಾಂಕಃ **12.09.2024**

2 ನೇ ಹೆಚ್ಚುವರಿ **ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಲಯ ಚನ್ನಗಿರಿ.**
**ಸಿಸಿ ನಂ:735/2024**

ಆರೋಪಿಃ ರಂಗಸ್ವಾಮಿ ಟಿ.ಎಮ್.

## ಆರೋಪಿತನ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 12.09.2024 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

**ಸ್ಥಳಃ ಚನ್ನಗಿರಿ**
**ದಿನಾಂಕಃ** 12.09.2024

**Sd/-**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ ಎಂ ಎಫ್ ಸಿ ನ್ಯಾಯಾಲಯ, ಚನ್ನಗಿರಿ.**